**QP CODE 56601**

# ಪ್ರಥಮ ಎಂ.ಎ. ಪದವಿ ಪರೀಕ್ಷೆ

## ಅಕ್ಟೋಬರ್/ನವೆಂಬರ್ 2016

(*ದೂರ ಶಿಕ್ಷಣ*)

## ಕನ್ನಡ

## ಪತ್ರಿಕೆ 1.1: ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯ

*ಸಮಯ: 3 ಘಂಟೆಗಳು]* *[ಅಂಕಗಳು: 80*

***ಸೂಚನೆ: 1. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ:***

***2. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು***

1. ಪ್ರಾಚೀನ ಕನ್ನಡ ಸಾಹಿತ್ಯದ ಸ್ವರೂಪವನ್ನು ವಿವರಿಸಿ.
2. ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಹಿನ್ನೆಲೆಗಳನ್ನು ಗುರುತಿಸಿ.
3. "ವಜ್ರಜಂಘ–ಶ್ರೀಮತಿಯರ ಭೋಗತೃಪ್ತಿ, ಸಹಮರಣಗಳು ಉತ್ಕಟ ರಸಚಿತ್ರವಾಗಿ ಬಂದಿವೆ", ಚರ್ಚಿಸಿ.
4. ಭರತ–ಬಾಹುಬಲಿ ವ್ಯಾಯೋಗ ಪ್ರಸಂಗದ ಸ್ವಾರಸ್ಯವನ್ನು ವಿವರಿಸಿ.
5. ಅಕ್ಕನ ವಚನಗಳಲ್ಲಿ ಆತ್ಮನಿವೇದನೆ ಹೇಗೆ ಪ್ರಕಟಗೊಂಡಿದೆ, ವಿಶದಪಡಿಸಿ.
6. ಕಾರ್ತಿಕ ಋಷಿಯ ಕತೆಯ ಆಶಯವನ್ನು ಸ್ಪಷ್ಟಪಡಿಸಿ.
7. ಧರ್ಮಾಮೃತದಲ್ಲಿ ಮತೀಯತೆಯನ್ನು ಕುರಿತು ನಿಮಗಿಟ್ಟಿರುವ ಭಾಗವನ್ನು ಆಧರಿಸಿ ಚರ್ಚಿಸಿ.
8. ಕರ್ಣನ ಜನ್ಮರಹಸ್ಯವನ್ನು ಕುರಿತ ಭಾಗವನ್ನು ವಿಮರ್ಶಿಸಿ.
9. ರಾಮಧಾನ್ಯ ಚರಿತ್ರೆ ಒಂದು ರೂಪಕ ಕಥನ, ಚರ್ಚಿಸಿ.
10. ***ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ:***

    ಅ. ಮಾರ್ಗ–ದೇಸಿ

    ಆ. ವಚನಗಳ ಭಾಷೆ

    ಇ. ನೀಲಾಂಜನೆಯ ನೃತ್ಯ ಪ್ರಸಂಗ

    ಈ. ಲಲಿತಾಂಗ – ಸ್ವಯಂಪ್ರಭೆ

    ಉ. ನಯಸೇನ

    ಊ. ಅಕ್ಕನ ವಚನಗಳಲ್ಲಿ ಪ್ರಾಣಿ ರೂಪಕಗಳು

    ಋ ವಿಧುರ

    ಎ. ವಿದ್ಯುಚ್ಚೋರರಿಸಿಯ ಕಥೆ

* * * * * * *

**QP CODE 56602**

# ಪ್ರಥಮ ಎಂ.ಎ. ಪದವಿ ಪರೀಕ್ಷೆ

## ಅಕ್ಟೋಬರ್/ನವೆಂಬರ್ 2016

*(ದೂರ ಶಿಕ್ಷಣ)*

## ಕನ್ನಡ

## ಪತ್ರಿಕೆ 1.2: ಭಾಷಾ ವಿಜ್ಞಾನ ಮತ್ತು ಛಂದಸ್ಸು

*ಸಮಯ: 3 ಘಂಟೆಗಳು]* *[ಅಂಕಗಳು: 80*

***ಸೂಚನೆ: 1. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ:***

***2. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು***

1. ಭಾಷೆ ಎಂದರೇನು? ವಿವಿಧ ವಿದ್ವಾಂಸರ ವ್ಯಾಖ್ಯಾನಗಳನ್ನು ವಿಶ್ಲೇಷಿಸಿ.
2. ಭಾಷೆ ಮತ್ತು ಸಮೂಹ ಸಂಸ್ಕೃತಿ ಹಾಗೂ ಭಾಷೆ ಮತ್ತು ರಾಜಕಾರಣಗಳ ಸಂಬಂಧವನ್ನು ವಿಶದಪಡಿಸಿ.
3. ಭಾಷೆ ಮತ್ತು ಸಮೂಹ ಮಾಧ್ಯಮಗಳ ಸಂಬಂಧವನ್ನು ವಿವರಿಸಿ.
4. ಕನ್ನಡ ಭಾಷೆಯ ಸಮಕಾಲಿನ ಸಮಸ್ಯೆಗಳನ್ನು; ಅವುಗಳನ್ನು ಎದುರಿಸಲು ಅಗತ್ಯ ಕ್ರಮಗಳನ್ನು ವಿವರಿಸಿ.
5. ಛಂದಸ್ಸೆಂದರೇನು? ಛಂದಸ್ಸಿನ ಇತಿಹಾಸ ಮತ್ತು ಪ್ರಯೋಜನವನ್ನು ಬರೆಯಿರಿ.
6. ಖ್ಯಾತ ಕರ್ನಾಟಕಗಳಾವುವು? ಅವುಗಳಲ್ಲಿ ಯಾವುದಾದರೂ ಎರಡರ ಲಕ್ಷಣಗಳನ್ನು ಉದಾಹರಣೆ ಸಹಿತ ವಿವರಿಸಿ.
7. ತ್ರಿಪದಿ ಛಂದಸ್ಸಿನ ಲಕ್ಷಣ ಮತ್ತು ಇತಿಹಾಸವನ್ನು ಸೋದಾರಣವಾಗಿ ನಿರೂಪಿಸಿ.
8. ರಗಳೆಯ ಪ್ರಬೇಧಗಳನ್ನು ಸೋದಾರಣವಾಗಿ ವಿವರಿಸಿ.
9. ಮಹಾಛಂದಸ್ಸಿನ ಲಕ್ಷಣವನ್ನು ವಿಶದಪಡಿಸಿ.
10. ***ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ:***

| | |
|---|---|
| ಅ. ಧ್ವನಿಮಾ | ಉ. ಯತಿ |
| ಆ. ಭಾಷಾ ಪ್ರಮಾಣೀಕರಣ | ಊ. ಅಂಶಷಟ್ಪದಿ |
| ಇ. ಉಪಭಾಷೆ | ಋ. ಸಾಂಗತ್ಯ |
| ಈ. ಭಾಷಿಕ ಸ್ವೀಕರಣ | ಎ. ಮುಕ್ತಛಂದಸ್ಸು |

* * * * * * *

**QP CODE 56603**

# ಪ್ರಥಮ ಎಂ.ಎ. ಪದವಿ ಪರೀಕ್ಷೆ

## ಅಕ್ಟೋಬರ್/ನವೆಂಬರ್ 2016

(*ದೂರ ಶಿಕ್ಷಣ*)

## ಕನ್ನಡ

## ಪತ್ರಿಕೆ 1.3: ಕನ್ನಡ ಸಾಹಿತ್ಯ ಹಿನ್ನೆಲೆ, ಪ್ರೇರಣೆ, ಪ್ರಭಾವಗಳು

*ಸಮಯ: 3 ಘಂಟೆಗಳು]* *[ಅಂಕಗಳು: 80*

***ಸೂಚನೆ: 1. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ:***

***2. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು***

1. ಹಳೆಗನ್ನಡ ಕಾವ್ಯದಲ್ಲಿ ಒಡಮೂಡಿದ ಲೌಕಿಕ ಆಗಮಿಕದ ಸ್ವರೂಪವನ್ನು ಪರಿಚಯಿಸಿ.
2. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಧಾರ್ಮಿಕ–ರಾಜಕೀಯ ಪ್ರಭಾವಗಳನ್ನು ಕುರಿತು ವಿವರಿಸಿ.
3. ಶಿಷ್ಟ ಮತ್ತು ಪರಿಶಿಷ್ಟದ ಪರಿಕಲ್ಪನೆಯನ್ನು ವಿವರಿಸಿ.
4. ಕನ್ನಡ ಸಾಹಿತ್ಯದ ಮೇಲೆ ರಾಮಾಯಣವು ಬೀರಿದ ಪ್ರಭಾವವನ್ನು ಪರಿಚಯಿಸಿ.
5. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವೀರಶೈವ ಧರ್ಮದ ಪ್ರಭಾವವನ್ನು ಕುರಿತು ವಿವರಿಸಿ.
6. ಜೈನ ಮತ್ತು ವೈದಿಕ ಧರ್ಮ ಕನ್ನಡ ಸಾಹಿತ್ಯದ ಮೇಲೆ ಬೀರಿದ ಪ್ರಭಾವವನ್ನು ವಿಶ್ಲೇಷಿಸಿ.
7. ರಾಷ್ಟ್ರೀಯತೆಯು ಕನ್ನಡ ಸಾಹಿತ್ಯದ ಮೇಲೆ ಬೀರಿದ ಪ್ರಭಾವವನ್ನು ಚರ್ಚಿಸಿ.
8. ನವ್ಯ ಸಾಹಿತ್ಯದ ಹಿನ್ನೆಲೆ, ಪ್ರೇರಣೆಗಳನ್ನು ಪರಿಚಯಿಸಿ.
9. ದಲಿತ – ಬಂಡಾಯ ಸಾಹಿತ್ಯದ ಹಿನ್ನೆಲೆಗಳನ್ನು ವಿಶ್ಲೇಷಿಸಿ.
10. ***ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ:***

    ಅ. ಅನುಭಾವ

    ಆ. ಮಾರ್ಗ ಪರಂಪರೆ

    ಇ. ಇಸ್ಲಾಂ ಧರ್ಮ

    ಈ. ಪ್ರಭುತ್ವ ಮತ್ತು ಕನ್ನಡ ಸಾಹಿತ್ಯ

    ಉ. ಕರ್ನಾಟಕದ ಏಕೀಕರಣ

    ಊ. ನವೋದಯ

    ಋ ಗಾಂಧಿವಾದ

    ಎ. ಅಂಬೇಡ್ಕರ್ ವಾದ

* * * * * * *

**QP CODE 56604**

# ಪ್ರಥಮ ಎಂ.ಎ. ಪದವಿ ಪರೀಕ್ಷೆ

## ಅಕ್ಟೋಬರ್/ನವೆಂಬರ್ 2016

(*ದೂರ ಶಿಕ್ಷಣ*)

## ಕನ್ನಡ

## ಪತ್ರಿಕೆ 1.4.1: ಜಾನಪದ ವಿಜ್ಞಾನ: ಮೂಲತತ್ವಗಳು ಮತ್ತು ಪ್ರಕಾರಗಳು

*ಸಮಯ: 3 ಘಂಟೆಗಳು]* *[ಅಂಕಗಳು: 80*

***ಸೂಚನೆ: 1. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ:***

***2. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು***

1. 'ಜಾನಪದ ಒಂದು ಜೀವಂತ ಪಳೆಯುಳಿಕೆ' – ವಿಶ್ಲೇಷಿಸಿ.
2. ಜಾನಪದ ವರ್ಗೀಕರಣ ಎಂದರೇನು? ಅಲನ್ ಡಂಡೆಸ್ ಅವರ ವರ್ಗೀಕರಣ ಕ್ರಮವನ್ನು ವಿವರಿಸಿ.
3. ಜಾನಪದ ಕ್ಷೇತ್ರ ಕಾರ್ಯದ ಮಹತ್ವವನ್ನು ಕುರಿತು ಬರೆಯಿರಿ.
4. ಪ್ರದರ್ಶನಾತ್ಮಕ ಕಲೆಗಳು ಎಂದರೇನು? ವಿವರಿಸಿ.
5. "ಧರ್ಮ, ಇತಿಹಾಸಗಳೊಂದಿಗೆ ಜಾನಪದದ ಸಂಬಂಧ"ವನ್ನು ಕುರಿತು ವಿಶ್ಲೇಷಿಸಿ.
6. ಪುರಾಣ ಮತ್ತು ಐತಿಹ್ಯಗಳ ಸ್ವರೂಪವನ್ನು ಕುರಿತು ಬರೆಯಿರಿ.
7. ಗಾದೆಗಳ ಸ್ವರೂಪ ಮತ್ತು ಲಕ್ಷಣಗಳನ್ನು ಕುರಿತು ಬರೆಯಿರಿ.
8. "ಒಗಟುಗಳ ಸ್ವರೂಪ"ವನ್ನು ಕುರಿತು ವಿವೇಚಿಸಿ.
9. ಭೌತಿಕ ಜಾನಪದದಲ್ಲಿ ವೃತ್ತಿ ಸಂಬಂಧಿ ಮತ್ತು ಮನರಂಜನಾತ್ಮಕ ವಸ್ತುಗಳ ಮಹತ್ವವನ್ನು ಕುರಿತು ಬರೆಯಿರಿ.
10. ***ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ:***

    ಅ. ಕರಪಾಲ ಮೇಳ

    ಆ. ಕೋಲೆ ಬಸವನಾಟ

    ಇ. ಜನಪದ ವಸ್ತು ಸಂಗ್ರಹಾಲಯ

    ಈ. ವೀರಗಾಸೆ

    ಉ. ಜಾನಪದ ಮತ್ತು ಕೃಷಿ ವಿಜ್ಞಾನ

    ಊ. ಜಾತ್ರೆ

    ಋ ನಂಬಿಕೆ

    ಎ. ಸಂಪ್ರದಾಯಗಳು

* * * * * * *

**QP CODE 56605**

# ಪ್ರಥಮ ಎಂ.ಎ. ಪದವಿ ಪರೀಕ್ಷೆ

## ಅಕ್ಟೋಬರ್/ನವೆಂಬರ್ 2016

(*ದೂರ ಶಿಕ್ಷಣ*)

## ಕನ್ನಡ

## ಪತ್ರಿಕೆ 1.4.2: ಆಧುನಿಕ ಕನ್ನಡ ಸಾಹಿತ್ಯ, ಕಾವ್ಯ ಮತ್ತು ನಾಟಕ

*ಸಮಯ: 3 ಘಂಟೆಗಳು]* *[ಅಂಕಗಳು: 80*

***ಸೂಚನೆ: 1. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ:***

***2. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು***

1. ಆಧುನಿಕ ಕನ್ನಡ ಕಾವ್ಯದ ಇತಿಹಾಸವನ್ನು ಕುರಿತು ಬರೆಯಿರಿ.
2. ನವೋದಯ ಮತ್ತು ನವ್ಯ ಕಾವ್ಯದ ಲಕ್ಷಣಗಳನ್ನು ಚರ್ಚಿಸಿರಿ.
3. ಅಯೋಧ್ಯ ಸಂಪುಟದ ರಾಮನ ವ್ಯಕ್ತಿತ್ವವನ್ನು ಕುರಿತು ವಿವರಿಸಿ.
4. ಕೆ.ಎಸ್.ನರಸಿಂಹಸ್ವಾಮಿ ಕಾವ್ಯದಲ್ಲಿ ಗಂಡು–ಹೆಣ್ಣು ಸಂಬಂಧ, ಸೂಕ್ಷ್ಮತೆ ಕುರಿತು ವಿವರಿಸಿ.
5. ಸಾವಿರಾರು ನದಿಗಳು ಸಂಕಲನದ ಮಹತ್ವದ ಕುರಿತು ವಿವೇಚಿಸಿರಿ.
6. ಆಧುನಿಕ ಕನ್ನಡ ನಾಟಕದ ಇತಿಹಾಸವನ್ನು ವಿವರಿಸಿ.
7. ಟೊಳ್ಳುಗಟ್ಟಿ–ನಾಟಕದ ಪುಟ್ಟು ಮತ್ತು ಮಾದುನ ವ್ಯಕ್ತಿತ್ವವನ್ನು ವಿವರಿಸಿ.
8. ಅಹಲ್ಯ ನಾಟಕ ಪ್ರತಿಪಾದಿಸುವ ಮನುಷ್ಯ ಸಂಬಂಧದ ಸಂಕೀರ್ಣತೆಗಳನ್ನು ವಿವೇಚಿಸಿ.
9. ಅಗ್ನಿ ಮತ್ತು ಮಳೆ ನಾಟಕದ ಯುವಕ್ರೀತ ಪರವಶುವಿನ ವ್ಯಕ್ತಿತ್ವವನ್ನು ಪರಿಚಯಿಸಿ.
10. ***ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ:***

    ಅ. ನವೋತ್ತರ ಸಾಹಿತ್ಯ

    ಆ. ಮಂಥರೆ

    ಇ. ತುಂಗಭದ್ರೆ

    ಈ. ದಲಿತರು ಬರುವರು

    ಉ. ನವ್ಯ ನಾಟಕ

    ಊ. ಸಾತು ಪಾತು

    ಋ ಅಹಲ್ಯ ನಾಟಕ ಇಂದ್ರ

    ಎ. ವಿಶಾಖ

* * * * * * *